# ಕರ್ನಾಟಕ ವಿಧಾನ ಪರಿಷತ್ತು

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 215
02. ಸದಸ್ಯರ ಹೆಸರು : ಶ್ರೀ ಲಹರ್ ಸಿಂಗ್ ಸಿರೋಯಾ
03. ಉತ್ತರಿಸುವ ದಿನಾಂಕ : 10.12.2020
04. ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೆ.ಎಸ್.ಆರ್.ಪಿ ಪರೀಕ್ಷೆಯಲ್ಲಿ ಕೆಲವು ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಹಾಗೂ ಇತರರು ನಕಲಿ ಅಭ್ಯರ್ಥಿಗಳಾಗಿ ಪರೀಕ್ಷೆ ಬರೆದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| ಆ) | ನಕಲಿ ಅಭ್ಯರ್ಥಿಗಳ ವೇಷದಲ್ಲಿ ಪರೀಕ್ಷೆ ಬರೆದು ಬಂಧಿತರಾದ ಪೊಲೀಸ್ ಸಿಬ್ಬಂದಿಗಳ ಹಾಗೂ ಇತರರ ವಿವರವನ್ನು ನೀಡುವುದು; | ವಿವರಗಳನ್ನು 'ಅನುಬಂಧ–ಅ' ರಲ್ಲಿ ನೀಡಿದೆ. |
| ಇ) | ನಕಲಿ ಜಾಲ ಭೇದಿಸಲು ಸರ್ಕಾರವು ಕೈಗೊಂಡ ಕ್ರಮಗಳಾವುವು? (ವಿವರಗಳನ್ನು ಒದಗಿಸುವುದು) (ಉತ್ತರವನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ನೀಡಲು ವಿನಂತಿಸಿದೆ. | ಈ ಸಂಬಂಧ ದಾಖಲಾದ ಅಪರಾಧ ಪ್ರಕರಣಗಳನ್ನು ಕೂಲಂಕಷವಾಗಿ ತನಿಖೆ ನಡೆಸಿ, ಅಭ್ಯರ್ಥಿಗಳನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸುವಂತೆ, ಅವರ ಮೋಬೈಲ್ ಗಳಲ್ಲಿನ ಡಾಟಾಗಳನ್ನು ಸಂಗ್ರಹಿಸಿ ಉಪಯುಕ್ತ ಮಾಹಿತಿ / ದಾಖಲೆಗಳು ಲಭ್ಯವಾದಲ್ಲಿ ಅವುಗಳನ್ನು ಸಂಗ್ರಹಿಸುವಂತೆ, ಆರೋಪಿ ಅಭ್ಯರ್ಥಿಗಳೊಂದಿಗೆ ಬೇರೆ ಇನ್ನೂ ಯಾರಾದರೂ ವ್ಯಕ್ತಿಗಳು ಶಾಮಿಲಾಗಿರುವರೆಂಬ ಬಗ್ಗೆ ತಿಳಿದು ಕೊಳ್ಳುವಂತೆ, ಇಂತಹ ಪ್ರಕರಣಗಳ ಹಿಂದೆ ಯಾವುದಾದರೂ ದೊಡ್ಡ ಜಾಲ ಕೆಲಸ ನಿರ್ವಹಿಸುತ್ತಿದೆಯೇ ಎಂಬುದರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಶೀಘ್ರವಾಗಿ ತನಿಖೆಯನ್ನು ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಪೊಲೀಸ್ ಆಯುಕ್ತರು ಹಾಗೂ ಪೊಲೀಸ್ ಅಧೀಕ್ಷಕ ರವರುಗಳಿಗೆ ಸೂಚನೆಗಳನ್ನು ನೀಡಲಾಗಿರುತ್ತದೆ.<br>ಮುಂದುವರೆದು, ಮುಂದಿನ ಲಿಖಿತ ಪರೀಕ್ಷೆಗಳಲ್ಲಿ ನಕಲಿ ಅಭ್ಯರ್ಥಿಗಳು ಪರೀಕ್ಷೆ ಬರೆಯುವುದನ್ನು ತಡೆಗಟ್ಟಲು ಹೊಸ ತಂತ್ರಾಂಶವನ್ನು ಅಳವಡಿಸಿಕೊಳ್ಳುವ ಸಂಬಂಧ ಇಲಾಖೆಯ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ. |

| | | |
|---|---|---|
| | | ಅಸಲಿ ಅಭ್ಯರ್ಥಿಗಳ ಹಾಗೂ ಅವರ ಬದಲಿಗೆ ಪರೀಕ್ಷೆ ಬರೆದಿರುವ ನಕಲಿ ಅಭ್ಯರ್ಥಿಗಳ ವಿರುದ್ದ ಸಂಬಂಧ ಪಟ್ಟ ಪೊಲೀಸ್ ಠಾಣೆಗಳಲ್ಲಿ ಅಪರಾಧ ಪ್ರಕರಣಗಳು ದಾಖಲಾಗಿರುತ್ತವೆ. ಅಲ್ಲದೇ ಆದೇಶ ಸಂಖ್ಯೆ: 15/ನೇಮಕಾತಿ-4/2019-20, ದಿನಾಂಕ: 05.12.2020 ರನ್ವಯ ಸದರಿ ಅಭ್ಯರ್ಥಿಗಳನ್ನು ಪೊಲೀಸ್ ಇಲಾಖೆಯು ನಡೆಸುವ ಮುಂದಿನ ಎಲ್ಲಾ ನೇಮಕಾತಿಗಳಿಗೆ ಶಾಶ್ವತವಾಗಿ ನಿಷೇದಿಸಲಾಗಿದೆ **(Debarred).** ಇದಲ್ಲದೇ ನಕಲಿ ಅಭ್ಯರ್ಥಿಯಾಗಿ ಪರೀಕ್ಷೆಗೆ ಹಾಜರಾದ ಪೊಲೀಸ್ ಸಿಬ್ಬಂದಿಗಳನ್ನು ಅಮಾನತ್ತುಗೊಳಿಸಿ ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಂಡು ಸಂಬಂಧಪಟ್ಟ ಶಿಸ್ತು ಪ್ರಾಧಿಕಾರಿಗಳು ಶಿಸ್ತು ಕ್ರಮ ಜರುಗಿಸಲು ಕ್ರಮ ಕೈಗೊಂಡಿರುತ್ತಾರೆ.<br>(ವಿವರ ಅನುಬಂಧ-ಆ ರಲ್ಲಿ ನೀಡಲಾಗಿದೆ). |

ಒಇ/121/ಪಿಪಿಎಸ್/2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

## "ಅನುಬಂಧ-ಅ"

| ಕ್ರಮ ಸಂಖ್ಯೆ | ಘಟಕ | ಪರೀಕ್ಷಾ ಕೇಂದ್ರ | ಅಭ್ಯರ್ಥಿಯ ಹೆಸರು, ಅರ್ಜಿಸಂಖ್ಯೆ, ನೊಂದಣೆ ಸಂಖ್ಯೆ ಮತ್ತು ವಿಳಾಸ | ಘಟನೆಯ ವಿವರ |
|---|---|---|---|---|
| 01 | ಪೊಲೀಸ್ ಆಯುಕ್ತರು, ಹುಬ್ಬಳ್ಳಿ-ಧಾರವಾಡ ನಗರ, | KLE Institute of Technology, Opp. Airport, Gokul, Hubballi-30 | Lakkappa Laxman Betageri, App No: 8410767 Roll No: 3172418 Badiger Tota , Savasuddi, Raybag Taluk, Belagavi District-591220. | ಸದರಿ ಪರೀಕ್ಷಾ ಕೇಂದ್ರದ ಬ್ಲಾಕ್ ಸಂಖ್ಯೆ:22ರಲ್ಲಿ ಮೂಲ ಅಭ್ಯರ್ಥಿಯಾದ ಲಕ್ಕಪ್ಪ ಲಕ್ಷ್ಮಣ್ ಬೆಟಗೇರಿ ರವರ ಬದಲಾಗಿ ಅಡಿವೆಪ್ಪ ಯರಗುಪ್ಪಿ ಎಂಬ ವ್ಯಕ್ತಿಯು ಲಿಖಿತ ಪರೀಕ್ಷೆಗೆ ಹಾಜರಾಗಿರುತ್ತಾನೆ. ಈ ಸಂಬಂಧ ಗೋಕುಲ ರಸ್ತೆ, ಪೊಲೀಸ್ ಠಾಣೆ, ಹುಬ್ಬಳ್ಳಿಯಲ್ಲಿ ಅಪರಾಧ ಸಂಖ್ಯೆ: 61/120 ಕಲಂ 120 ಬಿ 419 ಮತ್ತು 420 ಐಪಿಸಿ ರಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ. |
| 02 | ಪೊಲೀಸ್ ಆಯುಕ್ತರು, ಬೆಳಗಾವಿ ನಗರ | Gogate Institute of Technology, Jana Ganga, Udyambag, Belagavi-590008 | Shivanand Gokak App No: 8414766 Roll No: 3267861 Khanapur, Gokak Taluk, Belagavi-591231. | ಸದರಿ ಪರೀಕ್ಷಾ ಕೇಂದ್ರದಲ್ಲಿ ಬ್ಲಾಕ್ ನಂ.17 ರಲ್ಲಿ ಮೂಲ ಅಭ್ಯರ್ಥಿಯಾದ ಶಿವಾನಂದ್ ಗೋಕಾಕ್ ರವರ ಬದಲಿಗೆ ಭೀಮಪ್ಪಾ ಮಾದೇವ ಹುಲ್ಲೋಳಿ ಎಂಬ ವ್ಯಕ್ತಿಯು ಪರೀಕ್ಷೆಗೆ ಹಾಜರಾಗಿರುತ್ತಾನೆ. ಈ ಸಂಬಂಧ ಉದ್ಯಮ ಬಾಗ ಪೊಲೀಸ್ ಠಾಣೆ, ಬೆಳಗಾವಿ ನಗರದಲ್ಲಿ ಅಪರಾಧ ಸಂಖ್ಯೆ: 49/2020 ಕಲಂ 419, 420 ರಡಿಯಲ್ಲಿ ದಿನಾಂಕ: 22.11.2020 ರಂದು ಪ್ರಕರಣವನ್ನು ದಾಖಲಾಗಿರುತ್ತದೆ. |
| 03 | ಪೊಲೀಸ್ ಆಯುಕ್ತರು, ಬೆಳಗಾವಿ ನಗರ | Govt. Chintamanirao PU College, Shahapur, Belagavi | Sachin Dundappa Kabadagi App No: 8418759 Roll No: 3271905 Beeranagaddi, Gokak Taluk, Belagavi District-591307. | ಸದರಿ ಪರೀಕ್ಷಾ ಕೊಠಡಿ ಸಂಖ್ಯೆ: 06 ರಲ್ಲಿ ಮೂಲ ಅಭ್ಯರ್ಥಿಯಾದ ಸಚಿನ್ ದುಂಡಪ್ಪ ಕಬಾಡಗಿ ಈತನ ಬದಲಿಗೆ ಆನಂದ ಹನುಮಂತ ಒಡೆಯರ ಎಂಬುವವನ ಲಿಖಿತ ಪರೀಕ್ಷೆಗೆ ಹಾಜರಾಗಿರುತ್ತಾನೆ. ಈ ಸಂಬಂಧ ಶಹಾಪುರ ಪೊಲೀಸ್ ಠಾಣೆ, ಬೆಳಗಾವಿಯಲ್ಲಿ ಅಪರಾಧ ಸಂಖ್ಯೆ: 77/2020 ಕಲಂ 419, 420, 465, 468, 471 ರಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ. |
| 04 | ಪೊಲೀಸ್ ಆಯುಕ್ತರು, ಬೆಳಗಾವಿ ನಗರ | KLS English Medium Pre Primary, Primary & High School, KLS Campus, Tilakwadi, Belagavi | Mutturaj Shiroshi App No: 8501239 Roll No: 3268502 Girisagar, Yadwad, Mudalagi Taluk, Belagavi-591136. | ಸದರಿ ಪರೀಕ್ಷಾ ಕೇಂದ್ರದ 2ನೇ ಮಹಡಿಯ ಕೊಠಡಿ ಸಂಖ್ಯೆ: 07 ರಲ್ಲಿ ಮೂಲ ಅಭ್ಯರ್ಥಿಯಾದ ಮುತ್ತುರಾಜ ಶಿರೋಶಿ ಈತನ ಬದಲಿಗೆ ಸುರೇಶ ಲಕ್ಷ್ಮಣ ಕಡಬಿ |

| | | | | |
|---|---|---|---|---|
| | | | | ಎಂಬುವವನು ಲಿಖಿತ ಪುರೀಕ್ಷೆ ಬರೆಯಲು ಹಾಜರಾಗಿರುತ್ತಾನೆ. ಈ ಸಂಬಂಧ ತಿಲಕವಾಡಿ ಪೊಲೀಸ್ ಠಾಣೆ, ಬೆಳಗಾವಿ ನಗರದಲ್ಲಿ ಅಪರಾಧ ಸಂಖ್ಯೆ: 83/2020 ಕಲಂ 419, 420 ರಡಿಯಲ್ಲಿ ದಿನಾಂಕ: 22.11.2020 ರಂದು ಪ್ರಕರಣ ದಾಖಲಾಗಿರುತ್ತದೆ. |
| 05 | ಪೊಲೀಸ್ ಅಧೀಕ್ಷಕರು, ಚಿತ್ರದುರ್ಗ ಜಿಲ್ಲೆ | Govt. PU College for Girls, Chitradurga | Basavaraj Siddappa Chunappagol<br>App No: 8029462<br>Roll No: 3213179<br>Shilathibhavi Post, Hirehatti, Gokak Taluk, Belagavi-591344. | ಸದರಿ ಪರೀಕ್ಷಾ ಕೇಂದ್ರದ ಕೊಠಡಿ ಸಂಖ್ಯೆ:19 ರಲ್ಲಿ ಮೂಲ ಅಭ್ಯರ್ಥಿಯಾದ <u>ಬಸವರಾಜ ಸಿದ್ದಪ್ಪ ಚನ್ನಪ್ಪಗೋಳ್ ಈತನ ಬದಲಿಗೆ ಸಿದ್ಧಾರೂಡ ಮಲ್ಲಪ್ಪ ವಡೇರ್</u> ಎಂಬುವವನು ಲಿಖಿತ ಪರೀಕ್ಷೆಗೆ ಹಾಜರಾಗಿರುತ್ತಾನೆ. ಈ ಸಂಬಂಧ ಚಿತ್ರದುರ್ಗ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ;199/2020 ಕಲಂ 25 ಕರ್ನಾಟಕ ಶಿಕ್ಷಣ ಕಾಯ್ದೆ 1983 ಮತ್ತು 120 ಬಿ, 465, 420, 468, 419, 471 ರಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ. |
| 06 | ಪೊಲೀಸ್ ಆಯುಕ್ತರು, ಬೆಂಗಳೂರು ನಗರ | Kairalee Nikethan Education Trust, 5th Main, 9th Cross, Indiranagar, Bengaluru. | Sagar Waddar<br>App No: 8356487<br>Roll No: 3288134<br>Benachinamaradi Post, Gokak Taluk, Belagavi-591344. | ಮೂಲ ಅಭ್ಯರ್ಥಿಯಾದ <u>ಸಾಗರ್ ವಡ್ಡರ್ ಈತನ ಬದಲಿಗೆ ಗುರುನಾಥ್ ವಡ್ಡರಹಳ್ಳಿ</u> ಎಂಬಾತನು ಲಿಖಿತ ಪರೀಕ್ಷೆಯನ್ನು ಬರೆಯುವಾಗ ಸಿಕ್ಕಿಬಿದ್ದಿದ್ದು, ಈ ಸಂಬಂಧ ಇಂದಿರಾ ನಗರ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ; 183/2020 ಕಲಂ 419, 468, 465, 471, 420 ಐಪಿಸಿ ಮತ್ತು 25 ಆಫ್ ಕರ್ನಾಟಕ ಎಜುಕೇಷನ್ ಆಕ್ಟ್ ರೀತ್ಯ ಪ್ರಕರಣವನ್ನು ದಾಖಲಾಗಿರುತ್ತದೆ. |
| 07 | ಪೊಲೀಸ್ ಆಯುಕ್ತರು, ಬೆಂಗಳೂರು ನಗರ | Sacred Heart Girls High School, Jeevan Bhima Nagar, New Thippasandra Post, Bengaluru-560075 | Siddarood Y.Banaj<br>App No: 8206342<br>Roll. No. 3288677<br>Maladinni Post, Upparahatti, Gokak Taulk, Belagavi District-591233 | ಮೂಲ ಅಭ್ಯರ್ಥಿಯಾದ <u>ಸಿದ್ಧಾರೂಡ ವೈ.ಬನಾಜ್ ಈತನ ಬದಲಿಗೆ ಮಹಂತೇಶ್ ನಂದಿ</u> ಎಂಬುವವನು ಲಿಖಿತ ಪರೀಕ್ಷೆಯನ್ನು ಬರೆಯುವಾಗ ಸಿಕ್ಕಿಬಿದ್ದಿದ್ದು, ಈ ಸಂಬಂಧ ಜೀವನ್ ಭೀಮಾನಗರ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ: 284/2020 ಕಲಂ 419, 420 468, 471 ಐಪಿಸಿ ಪ್ರಕಾರ ಪ್ರಕರಣ ದಾಖಲಾಗಿರುತ್ತದೆ. |
| 08 | ಪೊಲೀಸ್ ಆಯುಕ್ತರು, ಬೆಂಗಳೂರು ನಗರ | JSS Engineering College, Channasandra, Bengaluru | Halappa Narayana Hallur<br>App No: 8059229<br>Roll No: 3295869 | ಮೂಲ ಅಭ್ಯರ್ಥಿಯಾದ <u>ಹಾಲಪ್ಪ ನಾರಾಯಣ ಹಲ್ಲೂರ</u> ಈತನ <u>ಬದಲಿಗೆ ನಾಗಪ್ಪ ತುಕ್ಕಣ್ಣವರ್,</u> |

| | | | | |
|---|---|---|---|---|
| | | | Venkatapur, Venkatapur Post, Gokak Taluk, Belagavi-591227. | ಸಿಪಿಸಿ, ಶೃಂಗೇರಿ ಪೊಲೀಸ್ ಠಾಣೆ, ಚಿಕ್ಕಮಗಳೂರು ಜಿಲ್ಲೆ ರವರು ಲಿಖಿತ ಪರೀಕ್ಷೆ ಬರೆಯುವಾಗ ಸಿಕ್ಕಿಬಿದ್ದಿದ್ದು, ಈ ಸಂಬಂಧ ಕೆಂಗೇರಿ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ: 368/2020 ಕಲಂ 419, 420, 465, 468, 471 ಐಪಿಸಿ 66(ಡಿ) ಐ.ಟಿ. ಕಾಯ್ದೆ ಪ್ರಕಾರ ಪ್ರಕರಣ ದಾಖಲಾಗಿರುತ್ತದೆ. |
| 09 | ಪೊಲೀಸ್ ಆಯುಕ್ತರು, ಬೆಂಗಳೂರು ನಗರ | SJR College for Women, No.1/D, 59th Cross, 4th 'M' Block, Rajajinagar, Bengaluru-560010 | Hanmant Waggannavar App No: 8259622 Roll No: 3293226 Mamadapur, Gokak Taluk, Belagavi-591233. | ಮೂಲ ಅಭ್ಯರ್ಥಿಯಾದ ಹನುಮಂತ ವಗನ್ನವರ್ ಈತನ ಬದಲಿಗೆ ಮಲ್ಲಿಕಾರ್ಜುನ ಬಬಲೆನ್ನವರ್ ಎಂಬುವವನು ಲಿಖಿತ ಪರೀಕ್ಷೆ ಬರೆಯುವಾಗ ಸಿಕ್ಕಿಬಿದ್ದಿದ್ದು, ಈ ಸಂಬಂಧ ಮಾಗಡಿ ರಸ್ತೆ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ: 176/2020 ಕಲಂ 419, 420 465, 468, 471, 120(ಬಿ) ರೆ/ವಿ 34 ಐಪಿಸಿ ರೀತ್ಯ ಪ್ರಕರಣ ದಾಖಲಾಗಿರುತ್ತದೆ. |
| 10 | ಪೊಲೀಸ್ ಅಧೀಕ್ಷಕರು, ಬಳ್ಳಾರಿ ಜಿಲ್ಲೆ | Basavarajeshwari P.U. College, 890B, Patel Nagar, Ananthpura Road, Ballari | Dhareppa Yalagudri App No: 8015378 Roll No: 3154175 Khilla Bag, Kumbara galli, Terdal, Jamkhandi Taluk, Bagalkote Dist-587315. | ಮೂಲ ಅಭ್ಯರ್ಥಿಯಾದ ಧರೆಪ್ಪ ಯಲಗುದ್ರಿ ಈತನ ಬದಲಿಗೆ ಬೇರೊಬ್ಬ ವ್ಯಕ್ತಿಯು ಲಿಖಿತ ಪರೀಕ್ಷೆ ಬರೆದಿದ್ದು, ಈ ಸಂಬಂಧ ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ:308/2020, ಕಲಂ 419, 420, 465, 468, 120ಬಿ 34 ಐಪಿಸಿ ರಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ. |
| 11 | ಪೊಲೀಸ್ ಇನ್ಸ್‌ಪೆಕ್ಟರ್‌ರವರ ಕಛೇರಿ, ಬಸವನಗುಡಿ, ಪೊಲೀಸ್ ಠಾಣೆ, ಬೆಂಗಳೂರು ನಗರ. | Govt. Pre-University for Girls, B.P.Wadia Road, Basavanagudi, Bengaluru-560004. | VIJAY PUDABANGI, App No: 8304836 Roll No: 3298991 Dasanatti, Kundaragi, Gokak, Belagavi-591122. | ಮೂಲ ಅಭ್ಯರ್ಥಿಯಾದ ವಿಜಯ ಪುಡಬಂಗಿಯ ಬದಲಾಗಿ ಸೋಮಯ್ಯ ಹಿರೇಮಠ ಎಂಬ ವ್ಯಕ್ತಿಯು ಲಿಖಿತ ಪರೀಕ್ಷೆಯನ್ನು ಬರೆದಿರುತ್ತಾನೆ. ಈ ಸಂಬಂಧ ಬಸವನಗುಡಿ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ: 110/2020 ಕಲಂ 465, 468, 471, 419, 420 120(ಬಿ) ಐಪಿಸಿ ಮತ್ತು ಕಲಂ 25 ದಿ ಕರ್ನಾಟಕ ಎಜುಕೇಷನ್ ಆಕ್ಟ್ 1983 ರೀತ್ಯ ಪ್ರಕರಣ ದಾಖಲಾಗಿರುತ್ತದೆ. |

'ಅನುಬಂಧ-ಬಿ'



## ನಕಲಿ ಅಭ್ಯರ್ಥಿಯಾಗಿ ಹಾಜರಾದ ಪೊಲೀಸ್ ಸಿಬ್ಬಂದಿಗಳ ವಿವರ

| ಕ್ರಮ ಸಂಖ್ಯೆ | ಅಸಲಿ ಅಭ್ಯರ್ಥಿ | ಅಸಲಿ ಅಭ್ಯರ್ಥಿಯ ಬದಲಾಗಿ ಪರೀಕ್ಷೆಯನ್ನು ಬರೆದ ಪೊಲೀಸ್ ಸಿಬ್ಬಂದಿ | ಇಲಾಖಾವತಿಯಿಂದ ಕೈಗೊಂಡ ಕ್ರಮ |
|---|---|---|---|
| 1 | ಬಾಲಪ್ಪ ನಾಗಪ್ಪ ಅಂಬ್ಲೂರು | ನಾಗಪ್ಪ ತುಕ್ಕಣ್ಣವರ್, ಸಿಪಿಸಿ, ಶೃಂಗೇರಿ ಪೊಲೀಸ್ ಠಾಣೆ, ಚಿಕ್ಕಮಗಳೂರು ಜಿಲ್ಲೆ | ಶಿಸ್ತು ಪ್ರಾಧಿಕಾರಿಗಳಾದ ಎಸ್.ಪಿ. ಚಿಕ್ಕಮಗಳೂರು ರವರು ಸದರಿ ಸಿ.ಪಿ.ಸಿ ರವರನ್ನು ಅಮಾನತ್ತಿನಲ್ಲಿರಿಸಿ ಇಲಾಖಾ ವಿಚಾರಣೆಯನ್ನು ಕೈಗೊಂಡಿರುತ್ತಾರೆ. |
| 2 | ಲಕ್ಕಪ್ಪ ಲಕ್ಷ್ಮಣ್ ಬೆಟಗೇರಿ | ಅಡಿವೆಪ್ಪ ಯರಗುಪ್ಪಿ, ಸಿ.ಪಿ.ಸಿ, ಅಂಕಲಗಿ ಪೊಲೀಸ್ ಠಾಣೆ, ಬೆಳಗಾವಿ ಜಿಲ್ಲೆ | ಸದರಿ ಸಿ.ಪಿ.ಸಿ ರವರು ಇನ್ನೂ ಪರೀವಿಕ್ಷಣಾ ಅವಧಿಯಲ್ಲಿರುವುದರಿಂದ (ಪ್ರೋಬೇಷನರಿ) ಶಿಸ್ತು ಪ್ರಾಧಿಕಾರಿಗಳಾದ ಎಸ್.ಪಿ. ಬೆಳಗಾವಿ ಜಿಲ್ಲೆ ರವರು ಸದರಿ ಸಿ.ಪಿ.ಸಿ ರವರನ್ನು ಪ್ರೋಬೇಷನರಿ ನಿಯಮಗಳನ್ವಯ ವಜಾಗೊಳಿಸಲು ಕ್ರಮ ಕೈಗೊಂಡಿರುತ್ತಾರೆ. |